ಸಿ.ಸಿ. ನಂ. 26970-2023
ಪಿಡಬ್ಲೂ-4

ಸಾಕ್ಷಿಯನ್ನು ದಿನಾಂಕಃ 17-02-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ದೋಷಾರೋಪಣ ಪತ್ರವನ್ನು ನಾನೇ ಹಾಕಿದ್ದೇನೆ. ನಿಪಿ. 3 ನ್ನು ರಾಮು (ಪಿಡಬ್ಲ್ಯೂ-2) ಎಂಬುವವರು ಕೊಟ್ಟಿಲ್ಲ. ನಿಪಿ.2 ರಲ್ಲಿ ಸೀಲು, ಸಹಿ ಇಲ್ಲಾ ಎಂದರೆ ಸರಿ. ನಿಪಿ.2 ಎಕ್ಸೈಲ್ ಫಾರ್ಮಟನಲ್ಲಿ ಇದೆ ಎಂದರೆ ಸರಿ. ಆ ಫಾರ್ಮಟನಲ್ಲಿ ಎಡಿಟ್ ಮಾಡಬಹುದು ಎಂದರೆ ನನಗೆ ಗೊತ್ತಿಲ್ಲ. ಮಹಜರ್ ನ್ನು ನಾನು ಮಾಡಿಲ್ಲ. ಮಹಜರ್ ಗಳಲ್ಲಿ ಆರೋಪಿಯ ತಂದೆಯನ್ನು ಸಾಕ್ಷಿಯನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಮಹಜರ್ ನ್ನು ನಾನು ಮಾಡಿಲ್ಲ ಎಂದು ಹೇಳುತ್ತಾರೆ.

ನಮ್ಮ ಇಲಾಖೆಯಲ್ಲಿ ಪಿಂಗರ್ ಪ್ರಿಂಟ್ ಇಕ್ಸಫರ್ಟ ಮತ್ತು ಡಿಜಿಟಲ್ ಎಕ್ಸಫರ್ಟ ಇದ್ದಾರೆ ಎಂದರೆ ಸರಿ. ನಿಪಿ. 5 ನ್ನು ಎಸ್ ಎಸ್ ಮೂರ್ತಿ ಬ್ಯಾಲೆಸ್ಟೀಕ್ ಎಕ್ಸಫರ್ಟ ರವರು ಕೊಟ್ಟಿದ್ದಾರೆ ಎಂದರೆ ಸರಿ. ಈ ಬ್ಯಾಲೆಸ್ಟೀಕ್ ಎಕ್ಸಫರ್ಟ ನಿಪಿ. 5 ರ ಬಗ್ಗೆ ಮಾಹಿತಿ ಗೊತ್ತಿಲ್ಲ ಆದರೂ ನನಗೆ ಬೇಕಾದ ರೀತಿಯಲ್ಲಿ ವರದಿ ತರಸಿ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಬ್ಯಾಲೆಸ್ಟೀಕ್ ಎಕ್ಸಫರ್ಟ ಕೆಲಸ ಗನ್, ವೆಫನ್ ಮತ್ತು ಬೂಲೆಟ್ ಬಗ್ಗೆ ಮಾತ್ರ ಎಂದರೆ ನನಗೆ ಗೊತ್ತಿಲ್ಲ.

ನಿಪಿ. 3 ರ ಆಧಾರದ ಮೇಲೆ ಯಾವ ಆರೋಪ ಆಗಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಸುಳ್ಳು ದೂರು ಕೊಟ್ಟಿದ್ದರು ಆದರ ಆಧಾರದ ಮೇಲೆ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ